ಸಾಕ್ಷಿಯನ್ನು ದಿಃ**27.01.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ–**

ನನ್ನ ತಾಯಿ ಗೃಹಿಣಿಯಾಗಿ ಮನೆಕೆಲಸ ಮಾಡುತ್ತಿದ್ದರು ಎಂದರೆ ಮನೆಕೆಲಸದ ಜೊತೆ ಜಲ್ಲಿ ಒಡೆಯುವ ಕೂಲಿ ಕೆಲಸವನ್ನು ಹಾಗೂ ವ್ಯವಸಾಯವನ್ನು ಮಾಡುತ್ತಿದ್ದರು. ನನ್ನ ತಾಯಿ ಜಲ್ಲಿ ಒಡೆಯುವ ಕೂಲಿ ಕೆಲಸವನ್ನು ಮಾಡುತ್ತಿದ್ದರೆಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿ ಹಾಕಿಲ್ಲ. ವಾದಿ ದಾವೆ ಸಲ್ಲಿಸುವ ಕಾಲಕ್ಕೆ ನಾವೆಲ್ಲರು ಒಟ್ಟು ಕುಟುಬಂದಲ್ಲಿ ಇದ್ದೆವು ಎಂದರೆ ಸರಿಯಲ್ಲ. 1996 ರಲ್ಲಿ ನಾವು ಬೇರೆಯಾದೆವು. ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇಲ್ಲ ಎಂದರೆ ಇವೆ. ಬೀಜಗನಹಳ್ಳಿ ಗ್ರಾಮದ ಸರ್ವೆ ನಂಬರ್ 20/4 ರಲ್ಲಿ ಬೀಜಗನಹಳ್ಳಿ ಪಂಚಾಯಿತಿಗೆ ಸೇರಿದ 4 ಗುಂಟೆ ಅಲ್ಲದೆ ಆ ಜಾಗದಲ್ಲಿ 3 ಮತ್ತು 5 ನೇ ಪ್ರತಿವಾದಿಯರ ಮನೆಗಳಿವೆ. ಸದರಿ ಮನೆಗಳನ್ನು ವಾದಿ ಈ ದಾವೆಯಲ್ಲಿ ಸೇರಿಸಿದ್ದಾರೆ ಎಂದರೆ ಗೊತ್ತಿಲ್ಲ.

ನನ್ನ ತಂದೆಗೆ ಒಬ್ಬ ತಂಗಿಯಿದ್ದರು. ನನ್ನ ತಂದೆ ಅವರ ತಂಗಿ ಆಸ್ತಿಗಳನ್ನು ಭಾಗ ಮಾಡಿಕೊಂಡಿಲ್ಲ. ನನ್ನ ತಂದೆಯ ತಂಗಿ ಗಂಡನ ಮನೆಯಲ್ಲಿದ್ದು ಈಗ ತೀರಿಹೋಗಿದ್ದಾರೆ. ಅವರಿಗೆ ಯಾವುದೇ ಆಸ್ತಿಗಳನ್ನು ಕೊಟ್ಟಿಲ್ಲ. ಸರ್ವೆ ನಂಬರ್ 141/4, 26/2 ಮತ್ತು 513/9 ರ ಮೂಲ ಕ್ರಯ ಪತ್ರಗಳು ನನ್ನ ಬಳಿ ಇತ್ತು ಎಂದರೆ ನನ್ನ ತಂದೆಯ ಬಳಿ ಇತ್ತು. ಆ ದಾಖಲೆಗಳನ್ನು ನೀವು ಹೇಗೆ ಹಾಜರುಪಡಿಸಿದ್ದೀರಿ ಎಂದರೆ ನನ್ನ ಹೆಸರಿಗೆ ಕೊಟ್ಟಿದ್ದರಿಂದ ಹಾಜರುಪಡಿಸಿದ್ದೇನೆ. ನಿಡಿ ಶ್ರೇಣಿಯ ದಾಖಲೆಗಳನ್ನು ನಾನೆ ಹಾಜರುಪಡಿಸಿದ್ದು ಆ ದಾಖಲೆಗಳು ನನ್ನ ಬಳಿಯೆ ಇತ್ತು. ನಾನು ಮನೆ ಹಿರಿಯ ಮಗ ಮತ್ತು ಬಿಕಾಂ ಪದವೀಧರ ಎಂಬ ಕಾರಣಕ್ಕಾಗಿ ದಾಖಲೆಗಳನ್ನು ನನ್ನ ಬಳಿಯೇ ಇರಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಯಾವಾಗ ನಿಮಗೆ ಕೊಟ್ಟರು ಎಂದರೆ ನಾನು ಮೂಲ ದಾಖಲೆಗಳನ್ನು ಉಪನೋಂದಣಾಧಿಕಾರಿಯ ಕಚೇರಿಯಿಂದ ಪಡೆದುಕೊಂಡಿದ್ದೇನೆ.

2003 ರ ಪೂರ್ವದಿಂದಲೂ ನನ್ನ ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿ. ಸಕ್ಕರೆ ಖಾಯಿಲೆ ಇತ್ತು. ನನ್ನ ತಾಯಿ 2003 ರಿಂದ ಅವರ ಕಿರಿಯ ಮಗನಾದ 8 ನೇ ಪ್ರತಿವಾದಿಯ ಜೊತೆ ವಾಸ ಇದ್ದರು. ವಾದಿ ಮತ್ತು ನನ್ನ ಉಳಿದ ಸಹೋದರಿಯರಿಗೆ ಯಾವುದೇ ಸರ್ವೆ ನಂಬರ್ ನಲ್ಲಿ ಭಾಗ ಕೊಟ್ಟಿಲ್ಲ. ಸಾಲ ಮಾಡಿ ಮದುವೆ ಮಾಡಿದ್ದು ಆ ಸಾಲವನ್ನು ನಾವೇ ತೀರಿಸಿದ್ದೇವೆಂದು ನುಡಿಯುತ್ತಾರೆ. ವಾದಿ ಮತ್ತು ಉಳಿದ ಸಹೋದರಿಯರಿಗೆ ಸಾಲ ಮಾಡಿ ಮದುವೆ ಮಾಡಿದ್ದೇವೆಂದು ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ. ನನ್ನ ಪ್ರತಿವಾದ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಅದರಲ್ಲಿ ಬರೆದಿರುವ ವಿಷಯಗಳೆಲ್ಲ

ಸತ್ಯವಾಗಿವೆ. ನಾನು ಮತ್ತು 6 ನೇ ಪ್ರತಿವಾದಿ ಕಾಳಮ್ಮ ಜಮೀನಿನ ಬದಲು ರೂ 3 ಲಕ್ಷ ಸ್ವೀಕರಿಸಿದ್ದೇವೆ ಎಂದು ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ ಎಂದರೆ ಸರಿಯಲ್ಲ.

8 ನೇ ಪ್ರತಿವಾದಿಯ ಹೆಸರಿನಲ್ಲಿರುವ ಬ್ಯಾರೆನ್ ಸಂಖ್ಯೆ 3357026. ನಿಡಿ 1 ರ ಕ್ರಯ ಪತ್ರಕ್ಕೆ ನಾನು ಮತ್ತು ಜಮೀನು ಖರೀದಿಸಿದವರು ಮಾಹಿತಿ ಕೊಟ್ಟಿದ್ದೇವೆ. ಪತ್ರದಲ್ಲಿ ಬರೆದಿರುವ ವಿಷಯಗಳೆಲ್ಲ ಸತ್ಯವಾಗಿವೆ. ನಿಡಿ 1 ರಲ್ಲಿ ಜಮೀನು ತಂದೆಯ ಸ್ವಯಾರ್ಜಿತವಾಗಿ ಬಂದಿದೆ ಎಂದು ಬರೆಸಿದ್ದೇನೆ. ನಿಡಿ 1 ರಲ್ಲಿ ನಾನು ಪಿತ್ರಾರ್ಜಿತ ಜಮೀನು ಎಂದು ಬರೆದಿದ್ದೇನೆ ಎಂದರೆ ನನ್ನ ಮಕ್ಕಳಿಗೆ ಪಿತ್ರಾರ್ಜಿತ ಎಂದು ಬರೆಯಲಾಗಿದೆ. ನಿಡಿ 1 ರಲ್ಲಿರುವ ಆಸ್ತಿ ಪಿತ್ರಾರ್ಜಿತ ಎಂದು ಗೊತ್ತಿದ್ದರೂ ಕೂಡ ದಾಖಲೆಯನ್ನು ಸೃಷ್ಠಿಸಿ 9 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ 13 ರ ದಾಖಲೆಯ ಪ್ರಕಾರ ನನ್ನ ತಂದೆ ಮತ್ತು ತಾಯಿ 2003 ರಲ್ಲಿ 4 ನೇ ಪ್ರತಿವಾದಿಯ ಜೊತೆ ಇದ್ದರು ಎಂದರೆ ಸರಿಯಲ್ಲ. ನಿಡಿ 13 ರ ದಾಖಲೆ ಸೃಷ್ಠಿ ಮಾಡಿದ ದಾಖಲೆಯಾಗಿದೆ. ನಿಡಿ 9 ಮತ್ತು 12 ರ ದಾಖಲೆಗಳು ಒಂದೆ ಎಂದರೆ ಸರಿ.

ನನ್ನ ತಂದೆ ಮತ್ತು ತಾಯಿ ಅವಿದ್ಯಾವಂತರು ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ಹೆಬ್ಬಟ್ಟಿನ ಸಹಿ ಹಾಕುವುದರಿಂದ ಆಸ್ತಿಗಳನುನ ಹೊಡೆಯಬೇಕೆಂದು ನಾನು, 5 ಮತ್ತು 8 ನೇ ಪ್ರತಿವಾದಿಯರು ಸೇರಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ 9, 12 ಮತ್ತು 13 ರ ದಾಖಲೆಗಳನ್ನು ನಾನು ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.